ದಿನಾಂಕಃ **17.08.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ವಿ.ಕೆ ರವರಿಂದಃ

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಎನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-**23** ಕ್ರಯದ ಕರಾರು ಪತ್ರಯು ಮಾಯಣ್ಣ ಮತ್ತು ಅವರ ಮಕ್ಕಳು ಪಿ.ಎನ್ ಮಂಜುನಾಥ ರವರ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಪ್ರತಿವಾದಿ **1** ಮತ್ತು **2** ರವರ ನಡುವೆ ದಾವಾ ಸ್ವತ್ತಿಗೆ ಸಂಬಂಧಿಸಿ ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತೇವೆ. **1** ನೇ ಪ್ರತಿವಾದಿ ನಾಗರಾಜ್ ರವರು ಮಾಯಣ್ಣ ರವರಿಗೆ ಸಂಬಂಧಿಕರು ಅಲ್ಲ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿ ನಾಗರಾಜ್, ಜಯಮ್ಮ ನಡುವೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿ ನನ್ನ ಮತ್ತು ಪ್ರತಿವಾದಿ **1** ಮತ್ತು **2** ರವರ ನಡುವೆ ಕ್ರಯದ ಕರಾರು ಪತ್ರ ಆಗಿರುವ ವಿಷಯವನ್ನು ನಾನು ಲೀಗಲ್ ನೋಟಿಸಿನಲ್ಲಿ ಆಗಲಿ ದಾವಾ ಪತ್ರದಲ್ಲಿ ಆಗಲಿ ಅಥವಾ ಮುಖ್ಯ ವಿಚಾರಣೆಯ ಪ್ರಮಾತ ಪತ್ರದಲ್ಲಿ ಆಗಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನಾನು ನೀಡಿದ ನಿಪಿ-**1** ಲೀಗಲ್ ನೋಟಿಸಿನಲ್ಲಿ ಕ್ರಯದ ಕರಾರು ಪತ್ರವನ್ನು ನನ್ನ ಹಾಗೂ ಮಾಯಣ್ಣ ಮತ್ತು ಪೇಟುಮಾಲ್ ನಾಯ್ಡು ನಡುವೆ ಕ್ರಯದ ಕರಾರು ಪತ್ರ ಆಗಿರುತ್ತದೆ ಎನ್ನುವ ವಿಷಯವನ್ನು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನಿಪಿ-**1** ನೋಟಿನಲ್ಲಿ ಕ್ರಯ ಕರಾರು ನನ್ನ ಮತ್ತು ಪ್ರತಿವಾದಿ **1** ಹಾಗೂ **2** ರವರ ನಡುವೆ

ಆಗಿರುವುದಿಲ್ಲ ಎನ್ನುವ ವಿಷಯವನ್ನು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-**23** ಕ್ರಯದ ಕರಾರು ಪತ್ರದ ಸ್ಟಾಂಪ್ ಪೇಪರನ್ನು ಮಾಯಣ್ಣ ಮತ್ತು ಪೆರುಮಾಲ್ ನಾಯ್ಡು ರವರು ಖರೀದಿಸಿರುತ್ತಾರೆ. ನಿಪಿ-**23** ಕ್ರಯದ ಕರಾರು ಪತ್ರದಲ್ಲಿನ ವಿಷಯವನ್ನು ಮಾಯಣ್ಣ ಮತ್ತು ಪೇರುಮಾಲ್ ನಾಯ್ಡು ರವರೇ ಹೇಳಿ ಬರೆಸಿರುತ್ತಾರೆ. ರೂ.**10** ಸಾವಿರ ಮುಂಗಡ ಹಣವನ್ನು ನಾನು ಕೊಟ್ಟಿರುತ್ತೇನೆ ಎನ್ನುವ ವಿಷಯವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಆಗಲಿ ದಾವಾ ಪತ್ರದಲ್ಲಿ ಆಗಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನಿಪಿ-**23** ಕ್ರಯದ ಕರಾರು ಪತ್ರವನ್ನು ಜಾರಿಗೊಳಿಸಲು ಎಷ್ಟು ಕಲಾವಧಿಮಿತಿಯನ್ನು ಅಳಡಿಸಿಕೊಂಡಿರುತೀರಿ ಎಂದರೆ ಸಾಕ್ಷಿಯು ಮೂರು ವರ್ಷ ಎಂದು ನುಡಿದಿರುತ್ತಾರೆ. ನಿಪಿ-**23** ಕ್ರಯದ ಕರಾರು ಪತ್ರದಲ್ಲಿ ಎನೇನು ಬರೆದಿರುತ್ತದೆ ಎನ್ನುವ ವಿಷಯ ನನಗೆ ಸ್ವಲ್ಪ ಮಾತ್ರ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-**23** ಕ್ರಯದ ಕರಾರು ಪತ್ರದಲ್ಲಿ ನಾನು ಹೇಳಿದಂತಹ ಮೂರು ವರ್ಷದ ಕಾಲಾವಧಿ ನಿಗದಿಪಡಿಸಲಾಗಿರುತ್ತದೆ ಎನ್ನುವ ವಿಷಯವನ್ನು ಎಲ್ಲಿ ಬರೆದಿರುತ್ತದೆ ಯಾವ ಕಂಡಿಕೆಯಲ್ಲಿ ಬರೆದಿರುತ್ತದೆ ಎನ್ನುವುದನ್ನು ಹೇಳಲು ಆಗುವುದಿಲ್ಲ. ನಿಪಿ-**23** ಕ್ರಯದ ಕರಾರು ಪತ್ರವನ್ನು ಜಾರಿ ಮಾಡಿ ಕೊಡುವಂತೆ ಮಾಯಣ್ಣ ಮತ್ತು ಪೇರುಮಾಲ್ ನಾಯ್ಡು ರವರಿಗೆ ಮೂರು ವರ್ಷಗಳ ಕಲಾವಧಿ ಮಿತಿಯಲ್ಲಿ ನೋಟಿಸನ್ನು ನೀಡಿರುತ್ತೇನೆ.

ನಿಪಿ-**23** ಕ್ರಯದ ಕರಾರು ಪತ್ರ ಕಾಲಾವಧಿ ಮುಗಿದ ಮೂರು ವರ್ಷಗಳ ನಂತರ ಪೇರುಮಾಲ್ ನಾಯ್ಡು ಮತ್ತು ಮಾಯಣ್ಣ ರವರಿಗೆ ನೋಟಿಸನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-**23** ಕ್ರಯದ ಕರಾರು ಪತ್ರವನ್ನು ನಾನು ದಿಃ**26.02.1992** ರಂದು ಮಾಡಿಸಿಕೊಂಡಿರುತ್ತೇನೆ. ನಿಪಿ-**1** ಲೀಗಲ್ ನೋಟಿಸನ್ನು ದಿಃ**09.05.2013**ರಲ್ಲಿ ನೀಡಿರುತ್ತೇನೆ ಎಂದರೆ ಸಾಕ್ಷಿಯು ಅದನ್ನು **2**ನೇ ಬಾರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಮೊದಲನೆಯ ಬಾರಿಗೆ ನೀಡಿದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಿಪಿ-**1** ಲೀಗಲ್ **?**ನೋಟಿಸಿನಲ್ಲಿ ಯಾವ ವಿಷಯ ಬರೆದಿರುತ್ತದೆ ಎನ್ನುವ ವಿಷಯ ಸ್ವಲ್ಪ ಮಾತ್ರ ಗೊತ್ತು. ನಿಪಿ-**1** ಲೀಗಲ್ ನೋಟಿಸಿನಲ್ಲಿ, ನಿಪಿ-**1** ಲೀಗಲ್ **?**ನೋಟಿಸ್ ನೀಡುವ ಪೂರ್ವದಲ್ಲಿ ಮತ್ತೊಂದು ನೋಟಿಸನ್ನು ನೀಡಿದ್ದೆ ಎನ್ನುವ ವಿಷಯವನ್ನು ಹೇಳಿ ಬರೆಸಿಲ್ಲ. ನಿಪಿ-**23** ಕ್ರಯದ ಕರಾರು ಪತ್ರದ ಕೊನೆಯ ಪುಟಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ಹೇಳಬಲ್ಲೆ. ಸಾಕ್ಷಿಯು ಮುಂದುವರೆದು ಹನುಮಂತಪ್ಪ, ಆಂಜಿನಪ್ಪ, ಗೋವಿಂದರಾಜು ಮತ್ತು ಚೆನ್ನಕೇಶವ ಮತ್ತು ಜಯರಾಮ್ ರವರು ಸಹಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಮೇಲ್ಕಂಡವನ್ನು ಹೊರತು ಪಡಿಸಿ ನಿಪಿ-**23** ಕ್ರಯದ ಕರಾರು ಪತ್ರಕ್ಕೆ ಬೇರೆ ಯಾರು ಸಹಿ ಮಾಡಿಲ್ಲ ಎಂದರೆ ಸರಿ.

PW1

ಮುಂದುವರೆದ ಪಾಟೀ ಸವಾಲಿಗಾಗಿ  ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.